ಕರ್ನಾಟಕ ಸರ್ಕಾರ

# ಮೀನುಗಾರಿಕೆ ನಿರ್ದೇಶನಾಲಯ

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಟೆಂಡರ್ ಪ್ರಕಟಣೆ ಸಂಖ್ಯೆ: DOF-TECH0MVH/12/2022** **ದಿನಾಂಕ:13-04-2022**

## -: ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ :-

2022-23 ನೇ ಸಾಲಿಗೆ ಮೀನುಗಾರಿಕೆ ನಿರ್ದೇಶನಾಲಯ ಕಛೇರಿಯ ಉಪಯೋಗಕ್ಕಾಗಿ 2017 ರ ಅಥವಾ ನಂತರದ ಮಾಡೆಲ್‌ನ ಹವಾನಿಯಂತ್ರಿತ 04 ವಾಹನಗಳ ಅಗತ್ಯವಿರುತ್ತದೆ. ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್ ಹಾಗೂ ಇತರೆ ಸಮಾನಾಂತರ ಮಾದರಿ ವಾಹನಗಳನ್ನು ನುರಿತ ಚಾಲಕರೊಂದಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆಗೆ ಒದಗಿಸಲು ಅರ್ಹ ವಾಹನ ಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಗಳಿಂದ ದ್ವಿ ಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ-ಟೆಂಡರ್ (e-Procurement Portal ಮುಖಾಂತರ) ಕರೆಯಲಾಗಿದೆ.

### :: ಟೆಂಡರ್ ವಿವರಗಳು ::

| ಕ್ರ ಸಂ | ಕಛೇರಿಗಳು | ವಾಹನ ವಿವರ ಹಾಗೂ ಮಾದರಿ(MODEL) | ಮಾಸಿಕ ದರ ಹಾಗೂ ಇ.ಎಂ.ಡಿ. ಮೊತ್ತದ ವಿವರಗಳು |
|---|---|---|---|
| 1 | ಮೀನುಗಾರಿಕೆ ನಿರ್ದೇಶಕರು ಬೆಂಗಳೂರು | 2017 ರ ಅಥವಾ ನಂತರದ ಮಾಡೆಲ್‌ನ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್ ಹವಾನಿಯಂತ್ರಿತ AC ವಾಹನ 04 | ಗರಿಷ್ಠ ರೂ.**40000/-** + ತೆರಿಗೆ **ಇ.ಎಂ.ಡಿ. ಮೊತ್ತ ರೂ: /-48000** (ಇ.ಎಂ.ಡಿ. ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ರವರ ಹೆಸರಿಗೆ Online ನಲ್ಲಿ ಜಮಾ ಮಾಡುವುದು) |

**ಸೂಚನೆ: ಹೆಚ್ಚಿನ ಮಾಹಿತಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದು.**

1) ಇ-ಟೆಂಡರ್ ಪ್ರಕಟಣೆ ದಿನಾಂಕ:18-04-2022 ಸಮಯ:10-00 AM
2) ಇ-ಟೆಂಡರ್(e-Procurement) ಗೆ ಸಂಬಂಧಿಸಿದ ದಾಖಲೆಗಳನ್ನು ಅಂತರ್ಜಾಲಕ್ಕೆ ರವಾನಿಸಲು (Upload ಮಾಡಲು)ಕೊನೆಯ ದಿನಾಂಕ:28-04-2022 ಸಮಯ:05-00 PM
3) ಇ-ಟೆಂಡರ್ ಪೂರ್ವ ಬಿಡ್ ದಿನಾಂಕ:25-04-2022

4) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ ಮತ್ತು ವೇಳೆ (ಇ-ಪೋರ್ಟ್ಲ್‌ನಲ್ಲಿ)ದಿನಾಂಕ:29-04-2022

ಸಮಯ 05.00 PM ಗಂಟೆಗೆ ತಾಂತ್ರಿಕ ಬಿಡ್

5) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ ಮತ್ತು ವೇಳೆ

ತಾಂತ್ರಿಕ ಅನುಮೋದನೆಯಾದ ನಂತರ

ಸಹಿ/-

ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ

M
16/4

## : ಟೆಂಡರ್ ಷರತ್ತು ಮತ್ತು ನಿಬಂಧನೆಗಳು :

1 ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಹ ಟೆಂಡರ್‌ದಾರರ ಹೆಸರಿನಲ್ಲಿಯೇ ವಾಹನವು ನೊಂದಣಿಯಾಗಿರಬೇಕು. ಸುಸಜ್ಜಿತವಾದ ಹಾಗೂ ಉತ್ತಮ ಸ್ಥಿತಿಯಲ್ಲಿರುವ ಹ್ಯಾಚ್‌ಬ್ಯಾಕ್/ಸಿಡಾನ್ ಮಾದರಿಯ ಸ್ವಿಫ್ಟ್ ಡಿಜೈರ್/ ಟೊಯೋಟಾ ಇಟಿಯೋಸ್/ ಟಾಟಾ ಇಂಡಿಗೋ ಹಾಗೂ ಇತರೆ ಸಮಾನಾಂತರ ಮಾದರಿ ವಾಹನಗಳನ್ನು ಹೊಂದಿದವರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬೇಕು. ಇಲ್ಲವಾದಲ್ಲಿ ಅಂತಹ ಟೆಂಡರ್ ರದ್ದುಗೊಳಿಸಲಾಗುವುದು.

2. ಟೆಂಡರ್ ಅರ್ಜಿಯೊಂದಿಗೆ **ರೂ.48000/-** ಇ.ಎಂ.ಡಿ. ಮೊತ್ತವನ್ನು ಪಾವತಿಸಬೇಕು ಹಾಗೂ ಪಾವತಿಸಿದ ದಾಖಲೆ ಸಲ್ಲಿಸಬೇಕು. ಇ.ಎಂ.ಡಿ. ಮೊತ್ತದಲ್ಲಿ ಯಾರಿಗೂ ವಿನಾಯಿತಿ ಇರುವುದಿಲ್ಲ. ಇ.ಎಂ.ಡಿ. ಮೊತ್ತವನ್ನು ನಗದು ಅಥವಾ ಚೆಕ್ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಇ.ಎಂ.ಡಿ. ಮೊತ್ತವನ್ನು ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ರವರ ಹೆಸರಿಗೆ Online ನಲ್ಲಿ ಜಮಾಮಾಡಿ ಲಗತ್ತುಗಳು ಸಲ್ಲಿಸದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

3. ಸರ್ಕಾರಿ ಆದೇಶದನ್ವಯ ಗರಿಷ್ಠ ಬಾಡಿಗೆ ದರ : ಮಾಸಿಕ 2500 ಕಿ.ಮೀ ಗಳಿಗೆ ಒಳಗೊಂಡಂತೆ ಹವಾನಿಯಂತ್ರಿತ ವಾಹನ ಮಾಸಿಕ ಬಾಡಿಗೆ ರೂ.40,000/- +GST ಗಳ ದರದ ಮಿತಿಯೊಳಗೆ ಬಾಡಿಗೆ ದರವನ್ನು ಹಾಗೂ ಹೆಚ್ಚುವರಿ 2500 ಕಿಲೋ ಮೀಟರ್ ಅಥವಾ 300 ಗಂಟೆಗಳ ಪ್ರತಿ ಕಿಲೋಮೀಟರ್ ಗೆ ರೂ.12/- ವಾಹನಕ್ಕೆ 300 ಗಂಟೆಗಳ ನಂತರ ಪ್ರತಿ ಗಂಟೆಗೆ ರೂ,150/- ಗಳು.

4. ಟೆಂಡರ್ ದ್ವಿ-ಲಕೋಟೆ ಪದ್ಧತಿಯದಾಗಿದ್ದು ತಾಂತ್ರಿಕ ಬಿಡ್‌ನೊಂದಿಗೆ ಎಲ್ಲಾ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವುದು. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ್ದಲ್ಲಿ ಮಾತ್ರ ಆರ್ಥಿಕ ಬಿಡ್ ತೆರೆಯಲಾಗುವುದು.

5. ಅರ್ಜಿಯನ್ನು ಅಂತರ್ಜಾಲದ ವೆಬ್‌ಸೈಟ್ www.eproc.karnataka.gov.in ರಲ್ಲಿ ಸಲ್ಲಿಸಬೇಕು. ತಾಂತ್ರಿಕ ಪ್ರಸ್ತಾವನೆಯ ಒಂದು ಸೆಟ್ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಬೇಕು. ನಿಖರವಾದ, ಸ್ಪಷ್ಟವಾದ ಹಾಗೂ ಮೂಲ ದಾಖಲೆಗಳಿಗೆ ವ್ಯತಿರಿಕ್ತವಾಗಿಲ್ಲದ,ವಾಹನಮಾಲೀಕರು/ಟ್ರಾವಲ್ಸ್ಸಂಸ್ಥೆ/ಏಜೆನ್ಸಿ/ಗಳಿಗೆ ಅನ್ವಯಿಸುವ ಮತ್ತು ತಾಂತ್ರಿಕ ಬಿಡ್‌ನಲ್ಲಿ ತಿಳಿಸಿದ ದಾಖಲೆಗಳನ್ನು ಮಾತ್ರ ಅಪ್‌ಲೋಡ್ ಮಾಡುವುದು. ಅನ್ವಯಿಸದ ಯಾವುದೇ ದಾಖಲೆಗಳನ್ನು ಅಪ್‌ಲೋಡ್ ಮಾಡಬಾರದು. ಹಿಂದಿನ ವರ್ಷದ ಅವಧಿಯಲ್ಲಿ ಸರ್ಕಾರಿ ಇಲಾಖೆಗಳಿಗೆ/ಸಂಸ್ಥೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆ ಒದಗಿಸಿದ್ದಲ್ಲಿ ಅನುಭವದ ಪ್ರಮಾಣ ಪತ್ರ ಸಲ್ಲಿಸಬೇಕು.

6. ಟೆಂಡರ್‌ದಾರರು ಒದಗಿಸುವ ವಾಹನಕ್ಕೆ ಗ್ಯಾಸ್‌ಕಿಟ್ ಅಳವಡಿಸಿದ್ದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಆರ್.ಸಿ ಬುಕ್ಕಿನಲ್ಲಿ ದಾಖಲಿಸಿ, ಅನುಮತಿ ಹಾಗೂ ದೃಢೀಕರಣ ಪಡೆದಿರಬೇಕು ಮತ್ತು ಅದರ ಪ್ರತಿ ಒದಗಿಸಬೇಕು.

7. ಆರ್ಥಿಕ ಬಿಡ್‌ನ್ನು ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಬೇಕು. ತಾಂತ್ರಿಕ ಬಿಡ್‌ನಲ್ಲಿ ದಾಖಲೆಯಾಗಿ ಸಲ್ಲಿಸಬಾರದು. ಸಲ್ಲಿಸಿದ್ದಲ್ಲಿ ಅವರನ್ನು ಆರ್ಥಿಕ ಬಿಡ್‌ಗೆ ಪರಿಗಣಿಸುವುದಿಲ್ಲ. ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದಲ್ಲಿ ಮಾತ್ರ ಆರ್ಥಿಕ ಬಿಡ್ ಪರಿಶೀಲಿಸಲಾಗುವುದು.

8. ಆರ್ಥಿಕ ಬಿಡ್‌ನಲ್ಲಿ ಕಡಿಮೆ ದರ ಸೂಚಿಸಿದ ಟೆಂಡರ್‌ದಾರರು (ಎಲ್-೧) ಆರ್ಥಿಕ ಬಿಡ್ ತೆರೆದ 02 ದಿನಗಳೊಳಗಾಗಿ ಈ ಕಛೇರಿಗೆ(ಕಛೇರಿ ದಿನಗಳಲ್ಲಿ) ಮೂಲ ದಾಖಲಾತಿಗಳೊಂದಿಗೆ ಹಾಜರಾಗತಕ್ಕದ್ದು.

9 ಹೊರಗುತ್ತಿಗೆ ಬಾಡಿಗೆ ವಾಹನ ಸೇವೆ ಒದಗಿಸುವ ವಾಹನಮಾಲೀಕರು/ಟ್ರಾವಲ್ಸ್ಸಂಸ್ಥೆ/ಏಜೆನ್ಸಿ/ಗಳು ಈ ಹಿಂದೆ ಈ ಕಛೇರಿಗೆ ಸೇವೆ ಒದಗಿಸಿದ್ದು, ವಾಹನಮಾಲೀಕರು/ಟ್ರಾವಲ್ಸ್ಸಂಸ್ಥೆ/ಏಜೆನ್ಸಿ/ಗಳ ಸೇವೆ ತೃಪ್ತಿಕರವಾಗಿಲ್ಲದಿರುವ ಬಗ್ಗೆ ಟೆಂಡರ್ ಸಮಿತಿಗೆ ಮನವರಿಕೆಯಾದಲ್ಲಿ ವಾಹನಮಾಲೀಕರು/ಟ್ರಾವಲ್ಸ್ಸಂಸ್ಥೆ/ಏಜೆನ್ಸಿ/ಗಳನ್ನು ಇ-ಟೆಂಡರ್‌ನ ಆರ್ಥಿಕ ಬಿಡ್‌ಗೆ ಪರಿಗಣಿಸುವುದಿಲ್ಲ.

10. ವಾಹನವು 2017 ಅಥವಾ ನಂತರದ ಮಾದರಿ(ಮಾಡೆಲ್)ಯದ್ದಾಗಿರಬೇಕು. ಅದರ ಸುಸ್ಥಿತಿಯ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ದೃಢೀಕರಣ ಪತ್ರ ಹೊಂದಿರಬೇಕು ಹಾಗೂ ಕಡ್ಡಾಯವಾಗಿ ಇನ್ಸುರೆನ್ಸ್ ಹೊಂದಿರತಕ್ಕದ್ದು. ನಂಬರ್ ಪ್ಲೇಟ್ ಹಳದಿ ಬಣ್ಣದ್ದಾಗಿರಬೇಕು.

11. ಒಪ್ಪಿಗೆಯಾದ ವಾಹನ ಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಯವರು ವಾಹನವನ್ನು ವೀಕ್ಷಣೆಗೆ ಹಾಜರು ಪಡಿಸಬೇಕು ಮತ್ತು ಟೆಂಡರ್ ಪ್ರಕ್ರಿಯೆಯ ಸಂದರ್ಭದಲ್ಲಿ ನಮೂದಿಸಿರುವ ವಾಹನದ ಮಾದರಿ ಹಾಗೂ ಅದೇ ವಾಹನವನ್ನು ಸರಬರಾಜು ಮಾಡಬೇಕು.

12. ಆಯ್ಕೆಯಾದ ಸಂಸ್ಥೆಯವರು /ಮಾಲೀಕರು ಭದ್ರತಾ ಠೇವಣಿ ರೂ,**48000/-**ಗಳನ್ನು ಕರಾರು ಪತ್ರದೊಂದಿಗೆ ಈ ಕಛೇರಿಗೆ ಪಾವತಿಸಬೇಕು. ಈ ಮೊತ್ತವನ್ನು ಬಾಡಿಗೆ ಕರಾರಿನ ಉಲ್ಲಂಘನೆಯಾದಲ್ಲಿ ಹಾಗೂ ಅದರಿಂದ ಉಂಟಾಗುವ ನಷ್ಟಗಳ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಂಡು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ. ಇಲ್ಲವಾದಲ್ಲಿ ಟೆಂಡರ್ ಅವಧಿ ಮುಕ್ತಾಯಗೊಂಡ ನಂತರ ಈ ಮೊತ್ತವನ್ನು ಹಿಂತಿರುಗಿಸಲಾಗುವುದು.

13. ಹೊರಗುತ್ತಿಗೆ ವಾಹನ ಸೇವೆಯ ಅವಧಿಯು ಕಾರ್ಯಾದೇಶದ ಪಡೆದ ದಿನಾಂಕ:01-05-2022 ದಿಂದ 30-04-2023 ರವರೆಗೆ ಸೀಮಿತವಾಗಿರುತ್ತದೆ. ಅನುದಾನ ಲಭ್ಯತೆಗನುಗುಣವಾಗಿ ಯಾವುದೇ ಸಂದರ್ಭದಲ್ಲಿ ಟೆಂಡರ್ ಅವಧಿಯನ್ನು ಮೊಟಕುಗೊಳಿಸುವ/ಮುಂದುವರೆಸುವ ಪೂರ್ಣ ಅಧಿಕಾರವನ್ನು ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರು ಹೊಂದಿರುತ್ತಾರೆ.

14. ಈ ವಾಹನ ಬಾಡಿಗೆ ಸೇವೆಯು ತಾತ್ಕಾಲಿಕವಾಗಿದ್ದು ಖಾಯಂ ಮಾಡಲು ಒತ್ತಾಯ ಹೇರುವಂತಿಲ್ಲ ಮತ್ತು ನ್ಯಾಯಾಲಯಕ್ಕೆ ಮೊಕದ್ದಮೆ ಹೂಡಲು ಅವಕಾಶವಿಲ್ಲ. ಟೆಂಡರ್ ಪಡೆದ ವಾಹನಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಯವರು ಟೆಂಡರ್ ಅವಧಿಯ ಮಧ್ಯದಲ್ಲಿ ವಾಹನವನ್ನು ಸಮಯಕ್ಕೆ ಸರಿಯಾಗಿ ಒದಗಿಸುವಲ್ಲಿ ವಿಫಲವಾದರೆ ಅಥವಾ ಅನಿವಾರ್ಯ ಕಾರಣಗಳಿಂದ ವಾಹನವನ್ನು ಹಿಂದಕ್ಕೆ ಪಡೆದಲ್ಲಿ ಅವರನ್ನು ಡಿಫಾಲ್ಟರ್ ಎಂದು ಪರಿಗಣಿಸಿ ಅವರ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ವಾಹನವನ್ನು ಹಿಂದಕ್ಕೆ ಪಡೆದ ತಿಂಗಳಿನ ಬಾಡಿಗೆಯನ್ನು ಪಾವತಿಸಲಾಗುವುದಿಲ್ಲ.

15. ವಾಹನಕ್ಕೆ ಸಂಬಂಧಿಸಿದಂತೆ ಭದ್ರತೆಯನ್ನಾಗಲೀ ಪಾರ್ಕಿಂಗ್ ಜಾಗವನ್ನಾಗಲೀ ಮೀನುಗಾರಿಕೆ ಇಲಾಖೆ ವತಿಯಿಂದ ಮಾಡಲಾಗುವುದಿಲ್ಲ.

16. ಬಾಡಿಗೆ ಆಧಾರದ ಮೇಲೆ ವಾಹನ ಒದಗಿಸುವ ಅನುಮೋದಿತ ಟೆಂಡರ್‌ದಾರರು ಇಲಾಖೆ ಒದಗಿಸುವ ನಾಮಫಲಕ ಅಳವಡಿಸತಕ್ಕದ್ದು.

17. ವಾಹನದಲ್ಲಿ ಮೀನುಗಾರಿಕೆ ಅಧಿಕಾರಿಗಳು/ಸಿಬ್ಬಂದಿಯವರನ್ನು ಹೊರತುಪಡಿಸಿ ಅನ್ಯರಿಗೆ ಅವಕಾಶವಿರುವುದಿಲ್ಲ. ಚಾಲಕರು ಪ್ರತಿದಿನವು ಕೈಗೊಂಡ ಪ್ರವಾಸ/ಚಲಿಸಿದ ಕಿಲೋಮೀಟರ್‌ಗಳ ಬಗ್ಗೆ ವಾಹನದ ಕಿಲೋಮೀಟರ್‌ಗೆ ಅನುಗುಣವಾಗಿ ಲಾಗ್ ಪುಸ್ತಕವನ್ನು ನಿರ್ವಹಿಸಿ ಸಂಬಂಧಿಸಿದ ಮೇಲಾಧಿಕಾರಿಗಳಿಂದ ದೃಢೀಕರಣ ಹಾಗೂ ಸಹಿ ಪಡೆದು ತಿಂಗಳಿಗೊಮ್ಮೆ ಬಿಲ್ಲನ್ನು ಪಾವತಿಗೆ ಸಲ್ಲಿಸುವ ಸಮಯದಲ್ಲಿ ಲಗತ್ತಿಸಿ ಸಲ್ಲಿಸಬೇಕು.

18. ಮಾಹೆಯಾನ ಬಾಡಿಗೆಯನ್ನು ಆಯಾ ಮಾಹೆಯ ಸೇವೆ ಪಡೆದ ನಂತರ ಅನುದಾನ ಲಭ್ಯತೆಯ ಮೇರೆಗೆ ಪಾವತಿಸಲಾಗುವುದು ಹಾಗೂ ತಡವಾದಲ್ಲಿ ಇದಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

19. ವಾಹನದ ಬಾಡಿಗೆ ಮೊತ್ತವನ್ನು ತಿಂಗಳಿಗೊಮ್ಮೆ ವಾಹನಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿ/ಗಳ ಬ್ಯಾಂಕ್ ಖಾತೆಗೆ ಕಾಲಕಾಲಕ್ಕೆ ಅನ್ವಯಿಸುವ ಸರ್ಕಾರದ ಆದೇಶಕ್ಕನುಸಾರವಾಗಿ ಮಾಸಿಕ ಬಾಡಿಗೆ ದರದಲ್ಲಿ ಆದಾಯ ತೆರಿಗೆ, ಜಿ.ಎಸ್.ಟಿ, ಸೆಸ್ ಹಾಗೂ ಇತರೆ ಕಡಿತಗಳನ್ನು ಮಾಡಿ) ಉಳಿಕೆ ಬಿಲ್ಲಿನ ಮೊತ್ತ ಪಾವತಿಸಲಾಗುವುದು.

20. ಟೆಂಡರ್ ಮೊತ್ತವನ್ನು ಹೊರತುಪಡಿಸಿ ಉಳಿದಂತೆ ಯಾವುದೇ ರೀತಿಯ ಮೊತ್ತ (ವಾಹನ ದುರಸ್ತಿ, ಚಾಲಕರ ಬ್ಯಾಟಾ, ಡಿಸೇಲ್, ಪೆಟ್ರೋಲ್, ಟೋಲ್ ಫೀಸ್, ಪಾರ್ಕಿಂಗ್ ಫೀಸ್) ಇತ್ಯಾದಿ ಪಾವತಿಸಲಾಗುವುದಿಲ್ಲ. ಪ್ರವಾಸದ ಸಮಯದಲ್ಲಿ ಹೊರಗೆ ತಂಗುವಂತಹ ದಿನಗಳಿಗೆ ಚಾಲಕನಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.

21. ವಾಹನವು ಕಛೇರಿ ಕಾರ್ಯಗಳಿಗೆ ಬೆಳಿಗ್ಗೆ 9.00 ಗಂಟೆಯಿಂದ ಸಾಯಂಕಾಲ 7.00 ಘಂಟೆಯವರೆಗಿನ ಅವಧಿಗೆ ಅಗತ್ಯವಿರುತ್ತದೆ. ಕೆಲಸದ ಒತ್ತಡದಿಂದಾಗಿ ಅವಧಿ ಮೀರಿ ಕ್ರಮಿಸಬೇಕಾಗಿ ಬಂದ ಸಂದರ್ಭಗಳಲ್ಲಿ ಚಾಲಕರು ಸಹಕರಿಸಬೇಕಾಗುತ್ತದೆ ಹಾಗೂ ಅಧಿಕಾರಿಗಳ ಕೆಲಸಗಳಿಗೆ ತಕ್ಕಂತೆ ಸಮಯವನ್ನು ಪರಿಪಾಲಿಸಬೇಕಾಗುತ್ತದೆ. ಕೆಲವೊಮ್ಮೆ ಸಂದರ್ಭಾನುಸಾರ ವಾಹನವನ್ನು ಸಿದ್ಧರಿರತಕ್ಕದ್ದು.

22. ಸರ್ಕಾರಿ ಆದೇಶದನ್ವಯ ವಾಹನವು ಕ್ರಮಿಸುವ ಒಟ್ಟು ಕಿಲೋ ಮೀಟರ್‌ಗಳು ಮಾಹೆಯಾನ ಗರಿಷ್ಠ **2500** ಕಿಲೋ ಮೀಟರ್‌ಗಳಾಗಿರುತ್ತದೆ. ತಿಂಗಳಿಗೆ **2500** ಕಿ.ಮೀ ದೂರ ಓಡಿಸಲು ಬದ್ಧರಾಗಿರತಕ್ಕದ್ದು. ತಿಂಗಳಿಗೆ **2500** ಕಿ.ಮೀ. ಗಿಂತ ಹೆಚ್ಚಾಗಿದ್ದಲ್ಲಿ `ವಿಶೇಷ ಸಂದರ್ಭ` ಗಳೆಂದು ಪ್ರತಿ ಕಿ.ಮೀ. ಗೆ **12** ರೂ. ಪಾವತಿ ಮಾಡಲಾಗುವುದು. ವಾಹನಕ್ಕೆ ಬೇಕಾದ ಇಂಧನವನ್ನು ವಾಹನಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿ/ಗಳು ಹಾಕಿಸತಕ್ಕದ್ದು. ಇದಕ್ಕಾಗಿ ಪ್ರತ್ಯೇಕವಾಗಿ ಮೀನುಗಾರಿಕೆ ಇಲಾಖೆ ವತಿಯಿಂದ ಪಾವತಿಸಲಾಗುವುದಿಲ್ಲ.

23. ಚಾಲಕನು ಚಾಲ್ತಿಯಲ್ಲಿರುವ ಲೈಸನ್ಸ್ ಹಾಗೂ ಬ್ಯಾಡ್ಜ್‌ಅನ್ನು ಹೊಂದಿರಬೇಕು. ಕನಿಷ್ಠ ಒಂದು ವರ್ಷ ವಾಹನ ಚಾಲನೆ ಮಾಡಿದ ಅನುಭವ ಇರಬೇಕು. ಸೌಜನ್ಯಯುತ ನಡವಳಿಕೆ ಹೊಂದಿರಬೇಕು. ಅಧಿಕಾರಿ ಹಾಗೂ ಸಿಬ್ಬಂದಿಯವರೊಂದಿಗೆ ವಿಧೇಯತೆಯಿಂದ ನಡೆದುಕೊಳ್ಳಬೇಕು.

-24. ವಾಹನ ಚಾಲಕ/ಏಜೆನ್ಸಿಯವರ ದುರ್ನಡತೆಯಿಂದ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿಕೊಡುವ ಷರತ್ತಿಗೆ ಏಜೆನ್ಸಿಯವರು ಬದ್ಧರಾಗಿರತಕ್ಕದ್ದು.

25. ವಾಹನಕ್ಕೆ ಒಂದು ಬಾರಿ ಚಾಲಕನನ್ನು ಒದಗಿಸಿದ ನಂತರ ಚಾಲಕರನ್ನು ಬದಲಾಯಿಸಬೇಕಾದ ಸಂದರ್ಭದಲ್ಲಿ ಮೀನುಗಾರಿಕೆ ನಿರ್ದೇಶಕರು ಇವರ ಪೂರ್ವಾನುಮತಿ ಪಡೆಯಬೇಕು ಹಾಗೂ ಕಛೇರಿಯಿಂದ ಬದಲೀ ಚಾಲಕರಿಗೆ ಪ್ರಸ್ತಾವನೆ ಬಂದಲ್ಲಿ ಕೂಡಲೇ ಸ್ಪಂದಿಸಿ ಬದಲೀ ಚಾಲಕರನ್ನು ಒದಗಿಸಬೇಕು.

26. ಚಾಲಕನು ರಜೆಯ ಮೇಲೆ ತೆರಳುವ ರಜಾ ದಿನಗಳಂದು ಪೂರ್ವಭಾವಿಯಾಗಿ ಟೆಂಡರುದಾರರು ಬದಲಿ ಚಾಲಕನ ವ್ಯವಸ್ಥೆ ಮಾಡಬೇಕು ಹಾಗೂ ವಾಹನದ ಸಣ್ಣಪುಟ್ಟ ರಿಪೇರಿಯನ್ನು ಕಛೇರಿ ಕೆಲಸಕ್ಕೆ ತೊಂದರೆಯಾಗದಂತೆ ತಕ್ಷಣ ಪೂರ್ವಭಾವಿ ಮಾಹಿತಿ ನೀಡಿ ರಿಪೇರಿ ಮಾಡಿಸಬೇಕು ಹಾಗೂ ದೊಡ್ಡ ಮಟ್ಟದ ರಿಪೇರಿ ಇದ್ದಲ್ಲಿ ಸದರಿ ಅವಧಿಯ ದಿನಗಳಿಗೆ ಬದಲಿ ವಾಹನ ವ್ಯವಸ್ಥೆಯನ್ನು ಮಾಡಿಕೊಡಬೇಕು.

27. ವಾಹನವನ್ನು ಸಮಯಕ್ಕೆ ಸರಿಯಾಗಿ ಒದಗಿಸಲು ಪದೇ ಪದೇ ವಿಫಲರಾದಲ್ಲಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

28. ಸಂಚಾರಿ ನಿಯಮಗಳನ್ನು ಉಲ್ಲಂಘನೆ ಮಾಡಿದಾಗ, ವಾಹನಕ್ಕೆ ಅಫಘಾತ ಉಂಟಾದಾಗ, ದೊಂಬಿ/ಮುಷ್ಕರ ಇತ್ಯಾದಿಗಳ ಸಂದರ್ಭದಲ್ಲಿ ಯಾವುದೇ ನಷ್ಟ ಮತ್ತು ತೊಂದರೆ ಉಂಟಾದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಹಾಗೂ ತತ್ಸಂಬಂಧದ ನ್ಯಾಯಾಲಯ ಪ್ರಕರಣಗಳಿಗೆ ವಾಹನಮಾಲೀಕರು/ಟ್ರಾವಲ್ಸ್ ಸಂಸ್ಥೆ/ಏಜೆನ್ಸಿಯವರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

29. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಮುನ್ನ ಸಲ್ಲಿಸಬೇಕಾದ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ/ಬದಲಾಯಿಸುವ ಅಧಿಕಾರ ಟೆಂಡರ್ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿ ಆದಲ್ಲಿ ಅದನ್ನು ಟೆಂಡರ್‌ದಾರರಿಗೆ -ಪೋರ್ಟಲ್ ಮುಖಾಂತರ ತಿಳಿಸಲಾಗುವುದು.

30. ಟೆಂಡರ್ ಅರ್ಜಿ ಅಪ್‌ಲೋಡ್ ಮಾಡುವ ದಿನಾಂಕವನ್ನು ವಿಸ್ತರಿಸುವ ಅಥವಾ ಟೆಂಡರ್‌ನ್ನು ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಹೊಂದಿರುತ್ತದೆ.

31. ಸ್ವೀಕೃತ ಟೆಂಡರುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಅಂತಿಮ ನಿರ್ಣಯ ಮೀನುಗಾರಿಕೆ ನಿರ್ದೇಶಕರು ಬೆಂಗಳೂರು ಇವರ ಪರಮೋಚ್ಚ ಅಧಿಕಾರಕ್ಕೊಳಪಟ್ಟಿರುತ್ತದೆ.

32. ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಬಿಡ್‌ನ ತೆರೆಯುವ ದಿನಾಂಕದಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಮುಂದಿನ ಕರ್ತವ್ಯದ ದಿನದಂದು ಟೆಂಡರ್ ತೆರೆಯಲಾಗುವುದು.

33. ಆಯ್ಕೆಯಾದವರು ಈ ಕಛೇರಿಯಿಂದ ವಿಧಿಸುವ ಷರತ್ತುಗಳಿಗೆ ಬದ್ಧರಾಗಿರುವುದು. ಯಾವುದೇ ಷರತ್ತು ಪಾಲಿಸುವಲ್ಲಿ ವಿಫಲರಾದಲ್ಲಿ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಆಯ್ಕೆಯಾದ ಸಂಸ್ಥೆಯವರು ತಮ್ಮ ಗುತ್ತಿಗೆಯನ್ನು ಪರಭಾರೆ ಮಾಡುವಂತಿಲ್ಲ. ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಅರ್ಜಿಯೊಂದಿಗೆ ಎಲ್ಲಾ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸ್ಕ್ಯಾನ್ ಮಾಡಿ ಸಲ್ಲಿಸಬೇಕು. ಟೆಂಡರ್ ತೆರೆದ ನಂತರ ದಾಖಲೆಗಳನ್ನು ಪಡೆಯಲಾಗುವುದಿಲ್ಲ.

34. ಟೆಂಡರ್ ಹಾಕಿರುವ ದರವು ತುಂಬಾ ಹೆಚ್ಚು ಆಗಿರುವುದು ಕಂಡುಬಂದಲ್ಲಿ ಅಥವಾ ಇತರೆ ಕಾರಣಗಳಿಂದ ಟೆಂಡರುದಾರರನ್ನು ಸಂಧಾನಕ್ಕೆ ಕರೆದಾಗ ಟೆಂಡರುದಾರರು ಹಾಜರಾಗತಕ್ಕದ್ದು.

35. ಕಾರ್ಯಾದೇಶ ನೀಡಿದ ನಂತರ ವಾಹನಗಳನ್ನು ಸಂಬಂಧಪಟ್ಟ ಕಛೇರಿಗೆ 07 ದಿನಗಳೊಳಗಾಗಿ ಒದಗಿಸತಕ್ಕದ್ದು.

36. ವಾಹನ ನೀತಿಗೆ ಸಂಬಂಧಿಸಿದಂತೆ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ಆರ್ಥಿಕ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶ, ಸೂಚನೆ ಹಾಗೂ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.

37. ಸಂಬಂಧಪಟ್ಟ ಕಚೇರಿಗಳಿಗೆ ಬಿಲ್ಲುಗಳನ್ನು ಸಲ್ಲಿಸಿ ಅಲ್ಲಿಯೇ ಬಿಲ್ಲಿನ ಮೊತ್ತಗಳನ್ನು ಪಡೆಯತಕ್ಕದ್ದು.

38. ಯಶಸ್ವಿ ಟೆಂಡರ್‌ದಾರರು ಮೇಲಿನ ಎಲ್ಲಾ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿ ಬದ್ಧರಾಗಿರುವ ಬಗ್ಗೆ ರೂ.100/- ಗಳ ಛಾಪಾ ಕಾಗದದಲ್ಲಿ ಕರಾರು ಪತ್ರ ಸಲ್ಲಿಸಬೇಕು.

39. ಇಲಾಖೆಯ ಅನುದಾನ ಲಭ್ಯತೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ವಾಹನಗಳನ್ನು ಪಡೆಯಲಾಗುವುದು.

40.ಟೆಂಡರ್ ಅವಧಿಯು ದಿನಾಂಕ:01-5-2022 ರಿಂದ 30-4-2023 ರವರೆಗೆ ಚಾಲ್ತಿಯಲ್ಲಿರುತ್ತದೆ.

41. ಯಶ್ವಸಿ ಬಿಡ್ಡುದಾರರು ಇಲಾಖೆಗೆ ಸೇವೆಯನ್ನು ಒದಗಿಸಿದಾಗ ಕರೆದಲ್ಲಿಗೆ ಬರುವುದು ತಪ್ಪಿದಲ್ಲಿ ಅಂತಹ ಬಿಡ್ಡುದಾರರನ್ನು ಇಲಾಖೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು ಮತ್ತು ಟೆಂಡರ್ ರದ್ದು ಪಡಿಸಲಾಗುವುದು.

ಸಹಿ/-

ಮೀನುಗಾರಿಕೆ ನಿರ್ದೇಶಕರು

ಮೀನುಗಾರಿಕೆ ನಿರ್ದೇಶಕರ ಪರವಾಗಿ

16/4